| ೧ | ೨ | ೩ | ೧ | ೨ | ೩ |
|---|---|---|---|---|---|
| | | ೧೩. ಬಳ್ಳಾರಿ ಜಿಲ್ಲೆ : ೫೧ | | | |
| (೧೫೪) | ಬಳ್ಳಾರಿ | ೧೧ | (೧೫೮) | ಹೊಸಪೇಟೆ | ೧೧ |
| (೧೫೫) | ಹಡಗಲಿ | ೮ | (೧೫೯) | ಕೂಡ್ಲಿಗಿ | ೭ |
| (೧೫೬) | ಸಿರಗುಪ್ಪ ಬೊಮ್ಮನಹಳ್ಳಿ | ೨ | (೧೬೦) | ಸಂಡೂರು | ೬ |
| (೧೫೭) | ಹರಪನಹಳ್ಳಿ | ೭ | (೧೬೧) | ಸಿರಗುಪ್ಪ | ೨ |
| | | ೧೪. ರಾಯಚೂರು ಜಿಲ್ಲೆ : ೨೮ | | | |
| (೧೬೨) | ದೇವದುರ್ಗ | ೫ | (೧೬೭) | ಮಾನವಿ | ೭ |
| (೧೬೩) | ಗಂಗಾವತಿ | ೮ | (೧೬೮) | ರಾಯಚೂರು | ೧೪ |
| (೧೬೪) | ಕೊಪ್ಪಳ | ೧೦ | (೧೬೯) | ಸಿಂಧನೂರು | ೬ |
| (೧೬೫) | ಕುಷ್ಟಗಿ | ೯ | (೧೭೦) | ಯಲಬುರ್ಗ | ೧೦ |
| (೧೬೬) | ಲಿಂಗಸುಗೂರು | ೯ | | | |
| | | ೧೫. ಬೀದರ್ ಜಿಲ್ಲೆ : ೧೭ | | | |
| (೧೭೧) | ಔರಾದ್ | ೧೨ | (೧೭೪) | ಬೀದರ್ | ೮ |
| (೧೭೨) | ಬಸವಕಲ್ಯಾಣ | ೧೦ | (೧೭೫) | ಹುಮ್ನಾಬಾದ್ | ೧೪ |
| (೧೭೩) | ಭಾಲ್ಕಿ | ೧೨ | | | |

ಒಟ್ಟು ಸರ್ಕಾರಿ ಪ್ರೌಢ ಶಾಲೆಗಳು : ೧೪೨೫

ಶ್ರೀ ಪಿ. ಸಿ. ಸಿದ್ದನಗೌಡ—ನಮ್ಮ ಕ್ಷೇತ್ರದ ಕೆಲವು ಗ್ರಾಮಗಳಿಗೆ ಸರ್ಕಾರಿ ಪ್ರೌಢಶಾಲೆಗಳನ್ನು ಕೇಳಿದ್ದೇವೆ. ಈಗ ನಮ್ಮ ತಾಲ್ಲೂಕಿನಲ್ಲಿ ಒಂದೇ ಒಂದು ಹೈಸ್ಕೂಲ್ ಇದೆ. ಬೇರೆ ತಾಲ್ಲೂಕುಗಳಲ್ಲಿ ನೋಡಿದಾಗ ಇಲ್ಲಿ ತಾರತಮ್ಯ ಆಗಿದೆ ಎಂದು ಕಂಡು ಬರುತ್ತದೆ. ಕೆಲವು ಗ್ರಾಮಗಳಿಗೆ ಪ್ರೌಢಶಾಲೆ ಮಂಜೂರ್ಮಾಡುವ ಸಲುವಾಗಿ ಸರ್ಕಾರಕ್ಕೆ ಹಣ ತುಂಬಿದ್ದೇವೆ, ಮನವಿ ಕೊಟ್ಟಿದ್ದೇವೆ. ಯಾವಾಗ ಮಂಜೂರ್ಮಾಡಿ ಕೊಡುತ್ತೀರಾ ಎಂದು ತಮ್ಮ ಮೂಲಕ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್—ಆಲ್ಲಿ ಸಾಕಷ್ಟು ಖಾಸಗಿ ಪ್ರೌಢಶಾಲೆಗಳಿವೆ. ಆದರೂ ಸರ್ಕಾರಿ ಪ್ರೌಢ ಶಾಲೆ ಬೇಕೆಂದು ಕೇಳುತ್ತಿದ್ದಾರೆ, ಎಲ್ಲೆಲ್ಲಿ ಸರ್ಕಾರಿ ಪ್ರೌಢಶಾಲೆಗಳ ಅವಶ್ಯಕತೆ ಇದೆ ಎಂಬುದನ್ನು ಮಾಹಿತಿಸಂಗ್ರಹಿಸಿದ್ದೇವೆ. ಆ ಬಗ್ಗೆ ಈಗಾಗಲೇ ಉತ್ತರಿಸಿದ್ದೇವೆ. ಸರ್ಕಾರಿ ಶಾಲೆಗಳನ್ನು ಎಷ್ಟು ಕೊಡಬೇಕು ಅಥವಾ ಕೊಡಬೇಕೇ ಬೇಡವೆ ಎಂಬ ಬಗ್ಗೆ ಇನ್ನೂ ತೀರ್ಮಾನ ಮಾಡಿಲ್ಲ. ಕೊಡಬೇಕಾದರೆ ಪರಿಶೀಲನೆ ಮಾಡಿಸುತ್ತೇನೆ.

## ಗಾಣಿಗೆದಾರರಿಗೆ ಹಾಗೂ ಸರಬರಾಜುದಾರರಿಗೆ ಹಣದ ಪಾವತಿ

೧೨೨ (೨೬೭) ಶ್ರೀ ಬಿ. ಬಸವಲಿಂಗಪ್ಪ (ಬೆಲಹೊಂಕ)—ಮಾನ್ಯ ಲೋಕೋಪಯೋಗಿ, ಬಂದರು ಸಚಿವರು ಪ್ರಾಜೆಕ್ಟಾಫಿಸ್ಟ್ಸ್ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಕಾರ್ಯಪಾಲಕ ಅಭಿಯಂತರರವರ ವಿಭಾಗಗಳು ಎಷ್ಟಿವೆ ?
(ನಿರ್ಧಾರಿತ ಮತ್ತು ಲೋಕೋಪಯೋಗಿ ಇಲಾಖೆ)

ಅ) ಗುತ್ತಿಗೆದಾರರಿಗೆ ಮತ್ತು ಸರಬರಾಜುದಾರರಿಗೆ ೩೧–೧೨–೮೬ರ ವರೆಗೆ ಬಟವಾಡೆ ಮಾಡ ಬೇಕಾಗಿರುವ ಮೊತ್ತವೆಷ್ಟು ?

ಇ) ಎಷ್ಟು ಜಾಗಗಳಲ್ಲಿ ಗುತ್ತಿಗೆದಾರರು ಮತ್ತು ಸರಬರಾಜುದಾರರು ತಮ್ಮ ಹಣ ಪಾವತಿ ಯಾಗದಿರುವುದರಿಂದಾಗಿ ಕಾಮಗಾರಿಗಳನ್ನು ನಿಲ್ಲಿಸಿರುತ್ತಾರೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ೧೯೮೮,

ಆ) ೩೬೫೫.೪೮ ಲಕ್ಷ ರೂಪಾಯಿಗಳು.

ಇ) ಕೆಲಸಗಳು ಕೆಲವೆಡೆ ಕೆಲವು ವಿಭಾಗಗಳಲ್ಲಿ ತಾತ್ಕಾಲಿಕವಾಗಿ ಸ್ಥಗಿತಗೊಂಡಿವೆ.

ಶ್ರೀ ಬಿ. ಬಸವಲಿಂಗಪ್ಪ.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ೩೬ ಕೋಟಿ ೫೫ ಲಕ್ಷ ಎಂದು ಹೇಳಿದ್ದಾರೆ. ಈಗ ಎರಡು ತಿಂಗಳು ಆಗಿರುವುದರಿಂದ ಈಗ ಎಷ್ಟು ಬಾಕಿ ಕೊಡಬೇಕಾಗಿದೆ ? (ಇ) ಪ್ರಶ್ನೆಗೆ ಉತ್ತರವಾಗಿ ಕೆಲಸಗಳು ಕೆಲವು ವಿಭಾಗಗಳಲ್ಲಿ ತಾತ್ಕಾಲಿಕವಾಗಿ ಸ್ಥಗಿತಗೊಂಡಿವೆ ಎಂದು ಹೇಳಿದ್ದಾರೆ. ೧೯೮೬–೮೭ರಲ್ಲಿ ಯಾವ ಕೆಲಸ ತೆಗೆದುಕೊಂಡಿದ್ದಿರಿ ಮತ್ತು ಎಷ್ಟು ಕೆಲಸಗಳನ್ನು ತೆಗೆದುಕೊಂಡಿದ್ದೀರಿ ? ಎಷ್ಟು ಕೆಲಸಗಳು ಇನ್ನೂ ಬಾಕಿ ಇವೆ. ಹೊಂದ ವರ್ಷದವರೆಗೆ ಸ್ಪಿಲ್ ಓವರ್ ವರ್ಕ್ಸ್ ಅನ್ನು ಎಷ್ಟು ತೆಗೆದುಕೊಂಡಿದ್ದೀರಿ ಮತ್ತು ಎಷ್ಟು ಬಾಕಿ ಇವೆ ?

ಶ್ರೀ ಹೆಚ್. ಡಿ. ದೇವೇಗೌಡ.—ಅವರು ತಮ್ಮ ಪ್ರಶ್ನೆಯಲ್ಲಿ ೩೧–೧೨–೮೬ರ ವರೆಗೆ ಎಂದು ಕೇಳಿದ್ದಾರೆ. ಅಲ್ಲಿಯವರೆಗೆ ಉತ್ತರ ತರಿಸಿದ್ದೇನೆ. ಈಚೆಗೆ ಏನಾಗಿದೆ ಎಂದು ಕೇಳುತ್ತಿದ್ದಾರೆ, ಅದಕ್ಕೆ ಬೇಕಾದರೆ ತರಿಸಿಕೊಡುತ್ತೇನೆ. ೩೧–೧೨–೮೬ರಿಂದ ಈಚೆಗೆ ಎಷ್ಟು ಬಿಲ್‌ಗಳು ಪೇಮೆಂಟ್ ಆಗಬೇಕಾಗಿದೆ, ಕೆಲಸ ಎಷ್ಟಾಗಿದೆ ಎಂಬ ಮಾಹಿತಿ ಈಗ ಇಲ್ಲ. ೩೧–೧೨–೮೬ರವರೆಗೆ ಮಾತ್ರ ಸೀಮಿತ ವಾಗಿದೆ. ಎರಡನೆಯದಾಗಿ, ಹಿಂದಿನ ವರ್ಷ ಕ್ಯಾರಿ ಓವರ್ ವರ್ಕ್ಸ್ ಎಷ್ಟು, ಮಂಜೂರಾಗಿರುವ ವರ್ಕ್ಸ್ ಎಷ್ಟು ಹೇಳಿ ಎಂದು ಹೇಳುತ್ತಿದ್ದಾರೆ. ಸಹಸ್ರಾರು ವರ್ಕ್ಸ್ ಇರುವುದರಿಂದ ವರ್ಕ್‌ವೈಸ್ ಮಾಡತಕ್ಕದ್ದು ಕಷ್ಟ ಇದೆ. ಇದನ್ನು ಅನ್‌ಸ್ಟಾರ್ಡ್ ಪ್ರಶ್ನೆಯಾಗಿ ಕನ್‌ವರ್ಟ್ ಮಾಡಿದರೆ ಕೊಡು ತ್ತೇನೆ. ಈಗ ಡಿಸೆಂಬರ್ ೩೧ರವರೆಗೆ ಏನು ಬ್ಯಾಲೆನ್ಸ್ ಪೇಮೆಂಟ್ ಮಾಡಬೇಕಾಗಿದೆಯೋ ಅದನ್ನು ಸಭೆಯ ಮುಂದಿಟ್ಟಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ೩೬ ಕೋಟಿ ೫೫ ಲಕ್ಷ ರೂಪಾಯಿ ಎಂದು ಏನು ಹೇಳಿ ದ್ದೀರಿ ಇದರಲ್ಲಿ ಸಪ್ಲೈ ಮಾಡಿರತಕ್ಕ ಸಾಮಾನುಗಳಿಗೆ ಎಷ್ಟು ಕೊಡಬೇಕು ? ಆಮೇಲೆ ಕಂಟ್ರಾಕ್ಟರು ಗಳಿಗೆ ಎಷ್ಟು ಕೊಡಬೇಕು ಎಂಬುದನ್ನು ಹೇಳುತ್ತೀರಾ ? ಅಂಕಿ ಅಂಶ ಇಲ್ಲ ಎಂದು ಹೇಳುತ್ತಾರೆ. ೩೧–೧೨–೮೬ರ ವರೆಗೆ ಇಷ್ಟು ಪ್ರಮಾಣದಲ್ಲಿ ಕಂಟ್ರಾಕ್ಟರಿಗೆ ಹಣ ಪಾವತಿ ಮಾಡಿಲ್ಲ ಎಂದರೆ ಕಂಟ್ರಾ ಕ್ಟರ್ ದೃಷ್ಟಿಯಲ್ಲಿ ಮತ್ತು ಸಾರ್ವಜನಿಕರ ದೃಷ್ಟಿಯಲ್ಲಿ ನಿಮ್ಮ ಇಲಾಖೆ ಬಗ್ಗೆ ಇರತಕ್ಕ ಕ್ರೆಡಿಬಲಿಟಿ ದಿವಸ ದಿವಸ ಹಾಳಾಗುತ್ತಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಹೆಚ್. ಡಿ. ದೇವೇಗೌಡ.—ಸರ್ಕಾರದ ಕ್ರೆಡಿಬಲಿಟಿ ಬಗ್ಗೆ ಚಿಂತನೆ ಮಾಡುವುದು ಅವರು ಬೇಡ. ಇಷ್ಟು ಮಾತ್ರ ಹೇಳುತ್ತೇನೆ. ಎರಡನೆಯದಾಗಿ ಹೇಳುವುದಾದರೆ ಇದೇನೂ ಹೊಸದಲ್ಲ. ಪಿ. ಡಬ್ಲ್ಯೂ. ಡಿ. ಎಂದರೆ ಇದು ಮೇಜರ್ ಪೆಂಡಿಂಗ್ ಡಿಪಾರ್ಟ್‌ಮೆಂಟ್. ಎಲ್. ಒ. ಸಿ. ಯಾವ ಕಾಲದಲ್ಲಿ ಇಂಟ್ರೊಡ್ಯೂಸ್ ಆಗಿಲ್ಲ ? ಎಲ್ಲ ಇಲಾಖೆಯಲ್ಲೂ ಇಂಟ್ರೊಡ್ಯೂಸ್ ಆಗಿದೆ. ನಾನು ಬಸವ ಲಿಂಗಪ್ಪನವರ ಬಗ್ಗೆ ದೋಷಾರೋಪಣೆ ಮಾಡುತ್ತಿಲ್ಲ. ಎಲ್. ಒ. ಸಿ. ಸಿಸ್ಟಂ ಇಂಟ್ರೊಡ್ಯೂಸ್ ಆಗುವುದು ಮೇಜರ್ ಸ್ಪೆಂಡಿಂಗ್ ಡಿಪಾರ್ಟ್‌ಮೆಂಟ್‌ನಲ್ಲಿ. ಫೈನಾನ್ಷಿಯಲ್ ಡಿಸಿಪ್ಲಿನ್‌ಗೋಸ್ಕರ ಅದನ್ನು ಮಾಡುತ್ತೇವೆ. ಪೆಂಡಿಂಗ್ ಬಿಲ್ಸ್ ಪ್ರಶ್ನೆ ಯಾವಾಗಲೂ ಇರುತ್ತದೆ. ಒಂದು ಸಾರಿ ೧೦ ಕೋಟಿ ಆದರೆ ಇನ್ನೊಂದು ಸಾರಿ ೧೫ ಕೋಟಿ ಆಗಬಹುದು. ಇನ್ನೊಂದು ಸಾರಿ ೧೨ ಕೋಟಿ ಇರ ಬಹುದು. ಹಿಂದಿನವರ್ಷದಲ್ಲಿ ಯಾವ ತಿಂಗಳಲ್ಲಿ ಎಷ್ಟೆಷ್ಟು ಬಾಕಿ ಇತ್ತು ಎಂಬ ಫಿಗರ್ಸ್ ಕೊಡ ಬಲ್ಲೆ. ಇದನ್ನು ಹೊಸದಾಗಿ ಕಂಡುಹಿಡಿಯುತ್ತಿದ್ದೇವೆ ಎಂದು ಲೆಕ್ಕ ಹಾಕಿಕೊಳ್ಳಬೇಕಾಗಿಲ್ಲ. ಸಾಮಾನ್ಯವಾಗಿ ಎಲ್. ಒ. ಸಿ. ೧೫ ಕೋಟಿ ಕೇಳಿದರೆ ೧೦ ಕೋಟಿ, ೧೨ ಕೋಟಿ ಕೊಡುತ್ತೇವೆ. ಇದು ಆನ್ ಎ ಚಾನಲ್‌ವಾಗಿ ನಡೆದುಕೊಂಡು ಬಂದಿರತಕ್ಕ ಕೆಲಸ. ೧೦ ಲಕ್ಷ ರೂಪಾಯಿ ಕೆಲಸಕ್ಕೆ ಒಪರ್ಷ ಗ್ಯಾರಂಟಿ ಸ್ಪೆಸಿಫಿಕ್ ಮಾಡಿ ಅಮೌಂಟ್ ಇಡುತ್ತೇವೆ. ಒಬ್ಬ ಕಂಟ್ರಾಕ್ಟರ್ ಶ್ವೇತಾಡಾಗಿ ಕೆಲಸ ಮಾಡುತ್ತಾನೆ. ನಾವು ಮೂರನೇ ಒಂದು ಭಾಗ ಗ್ಯಾರಂಟಿ ಇಟ್ಟಿರುತ್ತೇವೆ. ಅಂಥ ಸಂದರ್ಭದಲ್ಲಿ

ಬೇಗಾಗುತ್ತದೆ. ಕಂಟ್ರಾಕ್ಟರ್ ಕೆಪಾಸಿಟಿ ಮೇಲೆ ಇದು ಅವಲಂಬಿಸುತ್ತದೆ. ಸರ್ವೇಸಾಮಾನ್ಯವಾಗಿ ಬಿಲ್ಲ್ ಪೇಮೆಂಟ್ ಮಾಡತಕ್ಕ ಲಿಬಿಲಿಟಿ ಸರ್ಕಾರಕ್ಕೆ ಇದೆ. ಸನ್ಮಾನ್ಯ ಸದಸ್ಯರಿಗೆ ಈ ಬಗ್ಗೆ ಆಶ್ವಾಸನೆ ಕೊಡುತ್ತೇನೆ. ಅವರಿಗೆ ಕಳವಳ ಬೇಡ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಒಟ್ಟು ಕೋಟಿ ರೂಪಾಯಿ ಕೊಡುವುದಿದ್ದರೂ ಕೂಡ ನಿಮಗೆ ಕಾಳಜಿ ಬೇಡ ಎಂದು ಹೇಳುತ್ತಾರೆ. ನಾನು ಮಂತ್ರಿಯಾಗಿದ್ದರೆ ಈ ರೀತಿ ಹೇಳುತ್ತಿರಲಿಲ್ಲ. ಮಂತ್ರಿಗಳಾಗಿ ನಿಮಗೆ ಎಷ್ಟು ಕಾಳಜಿ ಇದೆಯೋ ಅಷ್ಟೇ ಕಾಳಜಿ ಸದಸ್ಯನಾಗಿ ನನಗೂ ಇದೆ. ಇದರಲ್ಲಿ ತಾರತಮ್ಯ ಇಲ್ಲ. ನೀವು ಕೆಲವು ಡಿವಿಷನ್‌ನಲ್ಲಿ ಕೆಲಸ ನಿಲ್ಲಿಸಿದ್ದಾರೆಂದು ಮೂರನೇ ಪ್ರಶ್ನೆಗೆ ನೀಡಿರುವ ಉತ್ತರದಲ್ಲಿ ಒಪ್ಪಿದ್ದೀರಿ. ಹಣ ಕೊಡದೇ ಇರುವುದಕ್ಕೋಸ್ಕರ ಕೆಲಸ ನಿಂತಿದೆ. ಇದರಿಂದ ಎಕ್ಸ್‌ಕಲೇಷನ್ ಆಫ್ ಪ್ರೈಸಸ್, ಬ್ರೀಚ್ ಆಫ್ ಕಂಟ್ರಾಕ್ಟ್ ಆಗುವುದಿಲ್ಲವೆ ? ಸರ್ಕಾರಕ್ಕೆ ನಷ್ಟ ಆಗುವುದಿಲ್ಲವೆ ? ಎಷ್ಟು ಡಿವಿಷನ್‌ನಲ್ಲಿ ಈ ರೀತಿ ಕೆಲಸ ನಿಲ್ಲಿಸಿದೆ ? ಅದು ಏಷ್ಟಿದೆ ? ಅದರಿಂದ ಎಷ್ಟು ಪ್ರಮಾಣದಲ್ಲಿ ಸರ್ಕಾರಕ್ಕೆ ಲುಕಾಸ್ನಾಯಿತು ಎಂಬುದನ್ನು ಹೇಳಬೇಕು. ಮತ್ತೆ.....

ಅಧ್ಯಕ್ಷರು.—ಅದಕ್ಕೆ ಉತ್ತರ ಹೇಳುತ್ತಾರೆ ಕುಳಿತುಕೊಳ್ಳಿ.

ಶ್ರೀ ಹೆಚ್. ಡಿ. ದೇವೇಗೌಡ.—ತಾವು ಎಷ್ಟು ಕೆಲಸ ಸ್ಥಗಿತವಾಗಿದೆ ಎಂದು ಕೇಳಿದ್ದೀರಿ, ನಾವು ಕೆಲವು ಕೆಲಸ ಸ್ಥಗಿತ ಮಾಡುತ್ತೇವೆ. ಪೈಟ್‌ಮಾಷ್ ಮಾಡತಕ್ಕದ್ದು, ಮುತ್ತಿಗೆ ಸನ್ನಿವೇಶ ಬಿಟ್ಟು ರಿಪೇರಿ ಕೆಲಸ ನಿಲ್ಲಿಸಿ ಎಂದು ಹೇಳುತ್ತೇವೆ. ಟೆಂಡರ್ ವರ್ಕ್ ಎಷ್ಟೆಷ್ಟು ನಿಂತಿದೆ, ಏನಾಗಿದೆ, ಈ ವರ್ಷ ಕೊಟ್ಟಿರುವ ಗ್ರಾಂಟ್ ಎಷ್ಟು, ಟೆಂಡರ್ ಅಗ್ರಿಮೆಂಟ್ ಎಷ್ಟು, ಟೈಂ ಎಷ್ಟು ಎಂಬುದನ್ನೆಲ್ಲಾ ಇಲ್ಲಿ ಹೇಗೆ ಹೇಳಲಿ ? ಕೆಲವು ಅನುತ್ಪಾದಕ ಪೆಜ್ಜಗಳನ್ನು ನಿಲ್ಲಿಸಿ ಎಂದು ಹೇಳುತ್ತೇವೆ. ಆದರಿಂದ ಸ್ವರ್ಗ ಏನೂ ಕಳಚಿ ಬೀಳುವುದಿಲ್ಲ. ತಾವು ಹೇಳಿದ ಕೆಲವು ಪ್ರಶ್ನೆ ಏನಿದೆ ಅದು ಬಜೆಟೆಡ್ ವರ್ಕ್ಸ್ ಮೂರು ನಾಲ್ಕು ವರ್ಷಕ್ಕೆ ಮುಗಿಸುತ್ತೇವೆಂದು ಟೆಂಡರ್ ಅಗ್ರಿಮೆಂಟ್ ಆಗಿದೆ. ವರ್ಕ್‌ವೈಸ್ ಹೇಳಬೇಕೆಂದರೆ ಹೇಳಬಹುದು. ನಾನು ಹೇಗೆ ಹೇಳಲಿ ?

ಶ್ರೀ ಮತಿ ಕೆ. ಎಸ್. ನಾಗರತ್ನಮ್ಮ.—ಒಂದು ಡಿವಿಷನ್‌ಗೆ ಎಲ್. ಬಿ. ಸಿ. ಕಳುಹಿಸುತ್ತೀರಿ. ಚಾಮರಾಜನಗರ ಡಿವಿಷನ್‌ಗೆ ಕಳುಹಿಸುತ್ತೀರಿ. ಇಂಥ ಕಂಟ್ರಾಕ್ಟರಿಗೆ ದುಡ್ಡು ಕೊಡಬೇಕೆಂದು ಇನ್‌ಸ್ಟ್ರಕ್ಷನ್ ಕೊಡುತ್ತೀರಿ. ಹಾಗೆ ಓರಲ್ ಇನ್‌ಸ್ಟ್ರಕ್ಷನ್ ಕೊಟ್ಟು ಬಾಕಿಯುಳಿದಿಲ್ಲಾ ಬಿಲ್ಲುಗಳಿಂದ ಕಾದುಕೊಂಡು ಕುಳಿತಿದ್ದಾರಲ್ಲ ಅವರ ಗತಿ ಏನು ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ವಿರೋಧಪಕ್ಷದ ನಾಯಕಿಯವರು ಒಂದು ಪ್ರಶ್ನೆ ಎತ್ತಿದ್ದಾರೆ. ನಾನಂತೂ ಈ ದಿವಸದವರೆಗೆ (ಆರು ತಿಂಗಳು ಮಧ್ಯೆ ಪಿ. ಡಬ್ಲ್ಯು. ಡಿ. ಮಂತ್ರಿ ಕೆಲಸದಿಂದ ಹೊರಗಿದ್ದೆ) ಯಾರಿಗೂ ಹೇಳಿಲ್ಲ. ಇಂಥ ಕಂಟ್ರಾಕ್ಟರ್‌ಗೆ ಬಿಲ್ ಪೇಮೆಂಟ್ ಮಾಡಬೇಕೆಂದು ಹೇಳಿರುವ ಒಂದು ನಿದರ್ಶನ ಕೊಟ್ಟರೂ ಆ ಸಭೆಯಲ್ಲಿ ತಲೆತಗ್ಗಿಸುವುದಕ್ಕೆ ಸಿದ್ಧ ನಿದ್ದೇನೆ. ಬೇರೆ ಇಲಾಖೆಯಲ್ಲಿ ಯಾವುದಾದರೂ ನಡೆದಿದ್ದರೆ ನನಗೆ ಗೊತ್ತಿಲ್ಲ. ದೂರವಾಣಿ ಮೂಲಕವೂ ಹೇಳಿಲ್ಲ. ಆ ರೀತಿ ಮಾಡಿ ಆತ್ಮವಂಚನೆ ಮಾಡಿಕೊಳ್ಳುವುದಕ್ಕೆ ನಾನು ಸಿದ್ಧನಿಲ್ಲ. ಬರವಣಿಗೆ ಬೇಡ. ದೂರವಾಣಿಯ ಮೂಲಕವಾದರೂ ಇಂತಹವರಿಗೆ ಪೇಮೆಂಟ್ ಮಾಡಿ ಎಂಬುದಾಗಿ ಹೇಳುವಂತಹ ಅಭ್ಯಾಸ ನನಗೆ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾರಾದರೂ ಬರೆದು ಕಳುಹಿಸುತ್ತಾರಾ ? ಅದರಲ್ಲೂ ನಿಮ್ಮಂತಹ ಬುದ್ಧಿವಂತರು ಆ ರೀತಿ ಬರೆದು ಕಳುಹಿಸುತ್ತಾರಾ ?

ಶ್ರೀ ಹೆಚ್. ಡಿ. ದೇವೇಗೌಡ.—ದೂರವಾಣಿಯ ಮೂಲಕವಾದರೂ ಹೇಳಿದರೆ ಹೇಳಿ. ಆ ರೀತಿ ಗಿಲ್ಟಿ ಕಾನ್ಷಿಯಸ್‌ನೆಸ್ ನಿಂದ ಪಾರಾಗಬೇಕಾಗುತ್ತದೆ. ಆತ್ಮ ವಂಚನೆ ಕೆಲಸವನ್ನು ನಾನಂತೂ ಮಾಡುವುದಿಲ್ಲ.

ಶ್ರೀ ವೇದಾಂತ ಹೆಬ್ಬಾರ್.—ಸರ್ಕಾರಿ ಹಾಗೂ ಪ್ರಾಥಮಿಕ ಶಾಲೆಗಳಿಗೆ ಅನುದಾನವಾಗಿ ಎಷ್ಟು ಹಣವನ್ನು ಕೊಡುತ್ತಿದ್ದೀರಿ ? ನನಗೆ ತಿಳಿದ ಮಟ್ಟಿಗೆ ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡುವಂತಹ ಶಿಕ್ಷಕರಿಗೆ ಪೂರ್ತಿ ಸಂಬಳವನ್ನು ಅನುದಾನರೂಪವಾಗಿ ಸರ್ಕಾರ ಕೊಡುತ್ತಿದೆ. ಆದರೂ ಕೂಡ ಇಂಗ್ಲೀಷ್ ಮೀಡಿಯಂನ ಪ್ರಾಥಮಿಕ ಶಾಲೆಗಳಲ್ಲಿ ಅಡ್ಮಿಷನ್ ಮಾಡುವುದಕ್ಕೆ ಸುಮಾರು ೧೦ ರಿಂದ ೧೫ ಸಾವಿರ ರೂಪಾಯಿಗಳವರೆಗೆ ತೆಗೆದುಕೊಳ್ಳುತ್ತಿದ್ದಾರೆ. ಬೆಂಗಳೂರು ನಗರದಂತಹ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಅದು ಇನ್ನೂ ಜಾಸ್ತಿ ಇದೆ. ಮೈಸೂರು ನಗರದಲ್ಲಿ ಸರ್ಕಾರಿ ಶಾಲೆಗೆ ಅಡ್ಮಿಷನ್‌ಗೆ ಸುಮಾರು ೧೦ ರಿಂದ ೧೫ ರೂಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಈ ರೀತಿ ಹಣವನ್ನು ತೆಗೆದುಕೊಂಡರೂ ಕೂಡ ಅಂತಹ

ಪ್ರಾಥಮಿಕ ಶಾಲೆಗಳಿಗೆ ಅನುದಾನವನ್ನು ಕೊಡತಕ್ಕಂತಹ ಅವಶ್ಯಕತೆ ಏನು ? ಈ ರೀತಿ ಹಣವನ್ನು ತೆಗೆದುಕೊಳ್ಳುತ್ತಿರುವುದನ್ನು ತಡೆಯಲಾಗುವುದು ಎಂಬುದಾಗಿ ಸರ್ಕಾರದವರು ಹಿಂದೆ ಹೇಳಿದ್ದರು. ಆ ಪ್ರಕಾರ ಈವರೆಗೆ ಎಷ್ಟು ಶಾಲೆಗಳಿಗೆ ಸರ್ಕಾರದಿಂದ ಕೊಡತಕ್ಕಂತಹ ಅನುದಾನವನ್ನು ತಡೆ ಹಿಡಿದಿದ್ದೀರಿ ? ಅಂತಹ ಶಾಲೆಗಳ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಡಿ. ಮಂಜುನಾಥ್.—ಇದರ ಬಗ್ಗೆ ಅನೇಕ ಕಡೆಯಿಂದ ನಮಗೆ ದೂರುಗಳು ಬಂದಿವೆ. ಬಂದಿದ್ದರೂ ಸಹ ಕೆಲವು ಶಾಲೆಗಳಿಗೆ ಅನುದಾನವನ್ನು ನಿಲ್ಲಿಸಿದ್ದೇವೆ. ಅವರ ಮೇಲೆ ಕ್ರಮ ತೆಗೆದು ಕೊಂಡಿದ್ದೇವೆ. ಕಾನೂನು ಪ್ರಕಾರ ಇವತ್ತಿನ ದಿವಸ ನಮಗೆ ಸ್ವಲ್ಪ ಕಷ್ಟವಾಗಿದೆ. ಸಮಗ್ರ ಶಿಕ್ಷಣ ಮಸೂದೆ ಕೇಂದ್ರ ಸರ್ಕಾರದ ಒಪ್ಪಿಗೆಗೋಸ್ಕರ ಹೋಗಿದೆ. ಅದು ಬಂದ ಮೇಲೆ ಅದರ ಅಡಿಯಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ವೇದಾಂತ ಹೆಬ್ಬಾರ್.—ನರ್ಸರಿ ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ಪ್ರವೇಶವನ್ನು ಕಡ್ಡಾಯ ವಾಗಿ ಇಲಾಖೆಯ ಮೂಲಕ ಅಂದರೆ ಆಯಾ ಶಾಲೆಗಳಲ್ಲಿ ಎಷ್ಟು ಹುಡುಗರಿಗೆ ಪ್ರವೇಶವಕಾಶವನ್ನು ಕೊಡಬಹುದೆಂಬುದು ಸಂಗ್ರಹ ಮಾಡಿ ಅದನ್ನು ನೇರವಾಗಿ ಸರ್ಕಾರವೇ ಹಂಚುವಂತಹ ಪ್ರಯತ್ನ ಬಗ್ಗೆ ಯೋಚನೆ ಮಾಡಿದೆಯೇ ? ಪ್ರಾಥಮಿಕ ಶಾಲೆಗಳಿಗೆ ಶಿಕ್ಷಕರ ಪೂರ್ತಿ ಸಂಬಳವನ್ನು ಕೊಡು ವುದರ ಜೊತೆಗೆ ಕಟ್ಟಡದ ಬಾಡಿಗೆಯನ್ನೂ ಸಹ ಸರ್ಕಾರ ಅನುದಾನದ ರೂಪದಲ್ಲಿ ಕೊಡುತ್ತಿದೆ. ಆದ್ದರಿಂದ ಪ್ರಾಥಮಿಕ ಶಾಲೆಗಳನ್ನು ರಾಷ್ಟ್ರೀಕರಣ ಮಾಡುವ ಬಗ್ಗೆ ಸರ್ಕಾರ ಏನಾದರೂ ಚಿಂತನೆ ಮಾಡಿದೆಯೇ ?

ಶ್ರೀ ಡಿ. ಮಂಜುನಾಥ್.—ಸ್ವಾಮಿ, ರಾಷ್ಟ್ರೀಕರಣ ಮಾಡುವುದು ಬಹಳ ಕಷ್ಟ. ಏಕೆಂದರೆ, ನಾವು ಎಲ್ಲರಿಗೂ ಇಡೀ ಸಮಾಜಕ್ಕೆ ಸರ್ಕಾರದ ಖರ್ಚಿನಲ್ಲಿ ಇವತ್ತು ವಿದ್ಯಾಭ್ಯಾಸ ಕೊಡುವುದು ಕಷ್ಟ ಇದೆ. ಈ ಬಗ್ಗೆ ಖಾಸಗೀ ಸಂಸ್ಥೆಗಳು ಮುಂದೆ ಬಂದಾಗ ಅವಕ್ಕೆ ಪರವಾನಿಗೆ ಕೊಡುತ್ತೇವೆ. ಕೆಲವು ಜನ ಶಾಲೆಗಳನ್ನು ಚೆನ್ನಾಗಿ ನಡೆಸುತ್ತಿದ್ದಾರೆ. ಕೆಲವು ಕಡೆ ದೂರುಗಳು ಬಂದಿವೆ. ಇಂಗ್ಲೀಷ್ ಮಾಧ್ಯಮ ಶಾಲೆಗಳನ್ನು ನಡೆಸುತ್ತಿರುವವರಿಗೆ ನಾವು ಅನುದಾನ ಕೊಡುತ್ತಾ ಇಲ್ಲ. ಎಲ್ಲಾ ಶಾಲೆ ಗಳನ್ನು ನ್ಯಾಷನಲೈಸ್ ಮಾಡುವುದು ಕಷ್ಟವಾಗುತ್ತದೆ.

ಶ್ರೀ ವೇದಾಂತ ಹೆಬ್ಬಾರ್.—ಪ್ರಾಥಮಿಕ ಶಾಲೆ ಹಾಗೂ ನರ್ಸರಿ ಶಾಲೆಗಳಿಗೆ ಪ್ರವೇಶಕ್ಕೆ ಎಲ್ಲೆಲ್ಲಿ ೫೦೦, ೧ ಸಾವಿರ, ೨ ಸಾವಿರ ರೂಪಾಯಿಗಳನ್ನು ಪಡೆದುಕೊಳ್ಳುತ್ತಾರೆ ಅಲ್ಲಿ ನೇರವಾಗಿ ಹೋಗಿ ಖಟು ಕೇಳುತ್ತಾರೆ. ಆದ್ದರಿಂದ ವಿದ್ಯಾ ಇಲಾಖೆಯಿಂದ ಪ್ರವೇಶ ತವಾಗಿ ಆಯಾಯ ಶಾಲೆಗಳಲ್ಲಿ ಯಾರು ಯಾರು ಅಪ್ಲಿಕೇಷನ್ ಹಾಕುತ್ತಾರೆ ಅವರಿಗೆ ಹಂಚುವ ವ್ಯವಸ್ಥೆ ಮಾಡುತ್ತೀರಾ ? ಆ ಬಗ್ಗೆ ಚಿಂತನೆ ಏನಾದರೂ ಇದೆಯೇ ?

ಶ್ರೀ ಡಿ. ಮಂಜುನಾಥ್.—ಆ ಚಿಂತನೆ ಮಾಡಿಲ್ಲ. ನರ್ಸರಿಯನ್ನು ಅವರಿಗೇ ಬಿಟ್ಟಿದ್ದೇವೆ. ಪ್ರೈಮರಿ ಶಾಲೆಗಳಿಗೆ ನಿಯಮಗಳು ಇವೆ. ಆ ಪ್ರಕಾರ ಅವರು ನಡೆದುಕೊಳ್ಳುತ್ತಿದ್ದಾರೆ. ಈಗ ಇರುವ ವ್ಯವಸ್ಥೆಯಲ್ಲಿ ಇನ್ನೂ ಮಾರ್ಪಾಟು ಮಾಡಬೇಕು ಎಂದು ನಾವು ಯೋಚನೆ ಮಾಡುತ್ತಿದ್ದೇವೆ ಸಮಗ್ರ ಮಸೂದೆ ಜಾರಿಗೆ ಬಂದಮೇಲೆ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನಿಸುತ್ತೇವೆ.

## ಸವದತ್ತಿಯಲ್ಲಿ ವಿಜ್ಞಾನ ಕಾಲೇಜು ಮಂಜೂರಾತಿ ಬಗ್ಗೆ

೧೨೪ (೫೮೭) ಶ್ರೀ ಚಂದ್ರಶೇಖರ ಮಾಮನಿ (ಸವದತ್ತಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಸವದತ್ತಿ ತಾಲ್ಲೂಕಿಗೆ ಸರ್ಕಾರಿ ಪ್ರಥಮ ದರ್ಜೆ ವಿಜ್ಞಾನ ಕಾಲೇಜು ಮಂಜೂರಾತಿ ಬದಲಾಗಿ ಕಲೆ ಕಾಲೇಜನ್ನು ಮಂಜೂರು ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ೧೯೮೭-೮೮ನೇ ಶೈಕ್ಷಣಿಕ ವರ್ಷದಲ್ಲಾದರೂ ಪ್ರಥಮ ದರ್ಜೆ ವಿಜ್ಞಾನ ಕಾಲೇಜನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಇಲ್ಲಿಗೆ ಯಾವುದೇ ಕಾಲೇಜು ಮಂಜೂರಾಗಿಲ್ಲ.

ಆ) ಪರಿಶೀಲಿಸಲಾಗುವುದು.